
## ಕೋಮಾ

ಪದ್ದಿ ಹಾಗೂ ಗುಂಡನದು ಅಪರೂಪದ ದಾಂಪತ್ಯ. ಎಲ್ಲಾ ವಿಷಯದಲ್ಲೂ ಅಸಮಾಧಾನ ತೋರುತ್ತಿದ್ದ ಪದ್ದಿಯನ್ನು ಸಮಾಧಾನ ಮಾಡುವುದು ಗುಂಡನ ಕೆಲಸ. ಒಮ್ಮೆ ಗುಂಡ ಪದ್ದಿಯ ಬಳಿ ಬಂದು, 'ಕೇಳಿದೇನೆ, ನಮ್ಮ ಎದುರು ಮನೆಯ ಯಂಕ ಕೋಮಾಕ್ಕೆ ಹೋಗಿದ್ದಾನಂತೆ' ಅಂದ. ಅದನ್ನು ಪೂರ್ತಿಯಾಗಿ ಕೇಳಿಸಿಕೊಳ್ಳದ ಪದ್ದಿ, 'ಅಯ್ಯೋ ಬಿಡಿ, ಅವರೇನು ದುಡ್ಡಿದ್ದವರು. ಎಲ್ಲಿಗೆ ಬೇಕಾದ್ರೂ ಹೋಗ್ತಾರೆ. ನಮ್ಮ ಹಣೆಬರ ಇಷ್ಟೆ. ನಮ್ಮಂಗೆ ಬರೀ ಮನೆ ಹಿಡಿದುಕೊಂಡು ಕೂರೋಕೆ ಅವರೇನು ದಡ್ಡರೆ–ದರಿದ್ರರೆ?' ಅಂದಳು.

**ಶಿವಲೀಲಾ ಸೊಪ್ಪಿಮಠ**





## ಯಮನಿಗೆ ಸಲಹೆ

ಸತ್ಯವಾನ ಸಾವಿತ್ರಿ ನಾಟಕದ ಪ್ರದರ್ಶನವದು. ನಾಟಕದ ನಡುವೆ ವಾದ್ಯಗಾರ ಜೋರಾಗಿ ಪಿಟೀಲು ನುಡಿಸುತ್ತಿದ್ದ. ಪಾತ್ರಧಾರಿಗಳ ದನಿಗಿಂತಲೂ ಪಿಟೀಲು ನಾದವೇ ಜೋರಾಗಿತ್ತು. ದೂರದಲ್ಲಿ ಕುಳಿತು ನಾಟಕ ನೋಡುತ್ತಿದ್ದ ವೃದ್ಧನೊಬ್ಬ ಪಿಟೀಲಿನ ಶಬ್ದಕ್ಕೆ ಬೇಸತ್ತ. ನಾಟಕದಲ್ಲಿ ಸಾವಿತ್ರಿ ಎಷ್ಟೇ ಕೇಳಿಕೊಂಡರೂ ಯಮ ಅವಳ ಗಂಡನ ಪ್ರಾಣವನ್ನು ಬಿಡಲು ಸಿದ್ಧವಿರಲಿಲ್ಲ. ಆಗ ಆ ವೃದ್ಧ, 'ಅಯ್ಯಾ! ಯಮರಾಜ, ಆ ಸಾವಿತ್ರಿ ಪತಿಯ ಪ್ರಾಣವನ್ನು ಬಿಟ್ಟುಬಿಡು. ನಿನಗೆ ಪ್ರಾಣವನ್ನು ತೆಗೆದುಕೊಂಡು ಹೋಗಲೇಬೇಕು ಅಂತಿದ್ದರೆ ಆ ಪಿಟೀಲು ನುಡಿಸುವನ ಪ್ರಾಣವನ್ನಾದರೂ ತೆಗೆದುಕೊಂಡು ಹೋಗು...' ಎಂದ.

**ಎಂ.ಕೆ. ಮಂಜುನಾಥ್**